ಅ) ಇಲ್ಲಿ ಕನಿಷ್ಟ ಪ್ರಮಾಣದ ಸಿಬ್ಬಂದಿಗಳನ್ನು ಒದಗಿಸದೇ ಇರುವುದರಿಂದ ಚಿಕಿತ್ಸಾಲಯಗಳ ಪೂರ್ಣ ಪ್ರಮಾಣದ ಪ್ರಯೋಜನ ಸಿಗದೆ ನಾಗರೀಕರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಈ) ಆ ಪಶುಚಿಕಿತ್ಸಾಲಯಗಳಲ್ಲಿ ಹಿರಿಯ ಪಶುಚಿಕಿತ್ಸಕರು ಮತ್ತು ಗ್ರೂಪ್ 'ಡಿ' ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಸಚಿವರು):

ಅ) ಬಂದಿದೆ

ಆ) ಬಂದಿದೆ.

ಇ) ಸಿಬ್ಬಂದಿ ಇಲ್ಲದೆ ಇರುವ ಪಶುವೈದ್ಯ ಶಾಲೆಗಳಿಗೆ ಪ್ರಭಾರಿ ವ್ಯವಸ್ಥೆ ಮಾಡಲಾಗಿದೆ.

ಈ) ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ತೋಟಗಾರಿಕಾ ಇಲಾಖೆಯಲ್ಲಿ ಹುದ್ದೆಗಳ ಖಾಲಿ ಇರುವ ಬಗ್ಗೆ ವಿವರ

380 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕಾ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು? (ಹುದ್ದೆವಾರು ವಿವರಗಳನ್ನು ನೀಡುವುದು)

ಆ) ಅವುಗಳಲ್ಲಿ ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಆ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ಜಿಲ್ಲೆಯಲ್ಲಿ ತೋಟಗಾರಿಕೆಯ ಅಭಿವೃದ್ಧಿ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಜಿಲ್ಲೆಯಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

1) ಜಿಲ್ಲಾ ತೋಟಗಾರಿಕೆ ಅಧಿಕಾರಿ	1
2) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	1
3) ಸಹಾಯಕ ತೋಟಗಾರಿಕೆ ನಿರ್ದೇಶಕರು	3
4) ಸಹಾಯಕ ತೋಟಗಾರಿಕೆ ಅಧಿಕಾರಿ	23
5) ಅಧಿಕ್ಷಕರು	1
6) ಪ್ರಥಮ ದರ್ಜೆ ಸಹಾಯಕರು	2
7) ತೋಟಗಾರಿಕೆ ಸಹಾಯಕರು	51
8) ದ್ವಿತೀಯ ದರ್ಜೆ ಸಹಾಯಕರು	5

9) ಬೆರಳಚ್ಚುಗಾರರು	2
10) ಸೇವಕ	4
11) ಚಾಲಕ	2
12) ತೋಟಗಾರರು	70

ಆ)

	ಮಂಜೂರಾದ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1) ಜಿತೋಆ	1	-	1
2) ಹಿಸತೋನ್	1	-	1
3) ಸತೋನಿ	3	3	-
4) ಸತೋಆ	23	22	-
5) ಅಧಿಷಕರು	1	1	-
6) ಪ್ರ.ದ.ಸ	2	2	-
7) ದ್ವಿ.ದ.ಸ	5	3	2
8) ಬೆರಳಚ್ಚುಗಾರರು	2	2	-
9) ತೋಟಗಾರಿಗೆ ಸಹಾಯಕರು	51	49	2
10) ತೋಟಗಾರ	70	70	-
11) ಚಾಲಕ	2	2	-
12) ಸೇವಕ	4	4	

ಇ) ಇಲ್ಲ

ಈ) ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅರಣ್ಯ ಸಂರಕ್ಷಣಾಧಿಕಾರಿಗಳು ಕೆನರಾ ವೃತ್ತ ಧಾರವಾಡ ಇವರ ಕಛೇರಿಯನ್ನು ಶಿರಸಿಗೆ ಸ್ಥಳಾಂತರಿಸುವುದರ ಬಗ್ಗೆ

381 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಧಾರವಾಡದಲ್ಲಿರುವ ಕೆನರಾ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯನ್ನು ಶಿರಸಿಗೆ ಸ್ಥಳಾಂತರಿಸಲಾಗುವುದೇ?*

ಆ) *ಹಾಗಿದ್ದಲ್ಲಿ ಶಿರಸಿಯಲ್ಲಿ ಸದರಿ ಕಛೇರಿಯ ಕಟ್ಟಡದ ಕೆಲಸ ಪ್ರಾರಂಭಗೊಂಡಿದೆಯೇ?*

ಇ) *ಈ ಕಟ್ಟಡದ ನಿರ್ಮಾಣ ಕೆಲಸ ಯಾವಾಗ ಪೂರ್ಣಗೊಳ್ಳುವುದು ಹಾಗೂ ಇದುವರೆವಿಗೂ ವೆಚ್ಚ ಮಾಡಲಾಗಿರುವ ಹಣವೆಷ್ಟು?*

ಈ) *ಸದರಿ ಕಛೇರಿಯನ್ನು ಧಾರವಾಡದಿಂದ ಸ್ಥಳಾಂತರಿಸಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುವುದು.*